ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ), ದಾವಣಗೆರೆ.

# ವಿದ್ಯಾವರಣ

ಸ್ಥಾಪನೆ- 1962

ವಿಶೇಷ ಪುರವಣಿ ಮಕ್ಕಳ ಮಾಸಪತ್ರಿಕೆ

ದಿನಾಂಕ : 14/10/2025 : www.sjjes.ac.in : info@sjjes.ac.in : +91.8192.277698

## ನಾಡಹಬ್ಬ ದಸರಾ



ನವರಾತ್ರಿ ಎಂದು ಕರೆಯುವ ದಸರಾ ಹಬ್ಬವು ಕರ್ನಾಟಕದ ಮನಮೋಹಕ ಹಬ್ಬ ಇದನ್ನು ಆಶ್ವೀಜ ಮಾಸದ ಪಾಡ್ಯದಿಂದ ದಶಮಿವರೆಗೂ ಆಚರಿಸಲಾಗುತ್ತದೆ. 9ನೇ ದಿನ ವಿಜಯದಶಮಿಯೊಂದಿಗೆ ಅಂತ್ಯಗೊಳ್ಳುತ್ತದೆ. ದಸರಾ ಹಬ್ಬವನ್ನು ದಕ್ಷಿಣ ಭಾರತ ಮತ್ತು ಉತ್ತರ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಭಿನ್ನ ಭಿನ್ನವಾಗಿ ಆಚರಿಕೊಂಡು ಬರುತ್ತಿದ್ದಾರೆ. ಕರ್ನಾಟಕದಲ್ಲಿ ದಸರಾ ಆಚರಣೆಯನ್ನು ಆಚರಿಸುತ್ತಿರುವ ನಗರಗಳಲ್ಲಿ ಜಗದ್ವಿಖ್ಯಾತವಾಗಿರುವುದು. ಮೈಸೂರು ದಸರಾ ಇದು ರಾಜಪ್ರಭುತ್ವದ ಪ್ರತೀಕವಾಗಿದೆ. ನಂತರ ಬದಲಾಗುತ್ತಾ ಎಂದು ನಾಡ ಹಬ್ಬವಾಗಿದೆ. ಈ ಹಬ್ಬವನ್ನು ಮೈಸೂರನ್ನು ರಕ್ಷಿಸುತ್ತಿರುವ ತಾಯಿ ಚಾಮುಂಡಿಯು ಮಹಿಷಾಸುರನೆಂಬ ರಾಕ್ಷಸನನ್ನು ಸಂಹರಿಸಿ ವಿಜಯ ಸಾಧಿಸುವುದರ ಸಂಕೇತವಾಗಿ ಆಚರಿಸಲಾಗುತ್ತದೆ.

ತಮಿಳುನಾಡಿನಲ್ಲಿ ಲಕ್ಷ್ಮಿ ಸರಸ್ವತಿ ಮತ್ತು ಶಕ್ತಿಯರ ಸಾಮೂಹಿಕ ಆಚರಣೆಯಾಗಿರುತ್ತದೆ. ಪಶ್ಚಿಮ ಬಂಗಾಳದಲ್ಲಿ ಕಾಳಿ ಅಥವಾ ದುರ್ಗಿಯ ಪೂಜೆಯೊಂದಿಗೆ ಆಚರಿಸುತ್ತಾರೆ. ಗುಜರಾತಿನಲ್ಲಿ ದುರ್ಗಾದೇವಿಗೆ ಪೂಜೆ ಸಲ್ಲಿಕೆಯಾಗಿ ಆಚರಿಸುತ್ತಾರೆ. ನೇಪಾಳದಲ್ಲಿ ದಸರಾವನ್ನು ದಸಿನ್ ಎಂಬುದಾಗಿ ಆಚರಿಸಲಾಗುತ್ತದೆ. ನವರಾತ್ರಿ ಉತ್ಸವಕ್ಕೆ 2,500ರ ವರ್ಷಗಳ ಇತಿಹಾಸವಿದೆ. ತ್ರೇತಾಯುಗದಲ್ಲಿ ಶ್ರೀ ರಾಮ ರಾವಣನ ವಿರುದ್ಧ ಯುದ್ಧ ಮಾಡಿ ಅಸುರರನ್ನು ಮರ್ಧಿಸಿದ ದಿನ. ದ್ವಾಪರ ಯುಗದಲ್ಲಿ ಪಾಂಡವರು ಮತ್ತು ಕೌರವರ ನಡುವೆ ಕುರುಕ್ಷೇತ್ರದಲ್ಲಿ ಯುದ್ಧ ನಡೆದು ಪಾಂಡವರು ವಿಜಯ ಸಾಧಿಸಿದ ದಿನ ದುಷ್ಟರ ಮೇಲೆ ಶಿಷ್ಟರು ಸಾಧಿಸಿದ ವಿಜಯವನ್ನೇ "ವಿಜಯದಶಮಿ"ಯಾಗಿ ಎಂದು ನಾವೆಲ್ಲ ಆಚರಿಸುತ್ತದ್ದೇವೆ. ಕಲೆ ಸಾಹಿತ್ಯ ಸಂಸ್ಕೃತಿಗಳಿಗೆ ತವರೂರು ಆಗಿದ್ದ ವಿಜಯ ನಗರದ ಅರಸರ ಕಾಲವನ್ನು ಸುವರ್ಣಯುಗ ಎನ್ನಲಾಗುತ್ತದೆ

15ನೇ ಶತಮಾನದಲ್ಲಿ ವಿಜಯನಗರದ ಅರಸರಿಂದ ಆರಂಭವಾದ ಈ ಹಬ್ಬವು ಇಂದಿಗೆ ಸುಮಾರು 400ಕ್ಕಿಂತ ಹೆಚ್ಚು ಆವೃತ್ತಿಗಳನ್ನು ನೋಡಿದೆ. ಮೈಸೂರು ದಸರಾ ಸಮಯದಲ್ಲಿ ಮೈಸೂರು ಅರಮನೆಯು ಮದುವಣಗಿತ್ತಿಯಂತೆ ಶೃಂಗಾರಗೊಳ್ಳುತ್ತದೆ. ಮೈಸೂರು ದಸರಾ ಹಬ್ಬದ ಪ್ರಮುಖ ಆಕರ್ಷಣೆ ಎಂದರೆ ಜಂಬೂ ಸವಾರಿ ವಿಶೇಷ ತರಬೇತಿ ಪಡೆದ ಆನೆಗಳು 75ಕಿ.ಗ್ರಾಂ. ಚಿನ್ನದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿಯ ವಿಗ್ರಹವನ್ನು ಹೊತ್ತು ವೈಭವದ ಮೆರವಣಿಗೆಯಲ್ಲಿ ಸಾಗುತ್ತದೆ. ಮೈಸೂರು ಅರಮನೆಯಿಂದ ಆರಂಭವಾಗುವ ಜಂಬೂಸವಾರಿ ಬನ್ನಿ ಮಂಟಪದ ಬಳಿ ಮುಕ್ತಾಯಗೊಳ್ಳುತ್ತದೆ. ಮೆರವಣಿಗೆಯಲ್ಲಿ ಹಲವಾರು ಸಾಂಸ್ಕೃತಿಕ ಕಲಾ ತಂಡಗಳು, ಕಲಾಕೃತಿಗಳು, ಕೈಮಗ್ಗ ಮತ್ತು ಇತರೆ ಸ್ಥಳೀಯ ಸಾಂಪ್ರದಾಯಿಕ ಕರಕುಶಲತೆಯ ಪ್ರದರ್ಶನಗಳನ್ನು ದಸರಾ ಸಮಯದಲ್ಲಿ ಪ್ರದರ್ಶಿಸಲಾಗುತ್ತದೆ. ದಸರಾ ಸಮಯದಲ್ಲಿ ಮೈಸೂರು ಅರಮನೆಯ ಸೊಬಗನ್ನು ನೋಡಲು ಎರಡು ಕಣ್ಣು ಸಾಲುವುದಿಲ್ಲ

ದಸರಾ ಅಥವಾ ವಿಜಯದಶಮಿ ಹಬ್ಬವು ಭಾರತದ ಪ್ರಮುಖ ಧಾರ್ಮಿಕ ಹಬ್ಬ, ಕೆಟ್ಟದರ ಮೇಲೆ ಒಳ್ಳೆಯದು ಜಯಿಸುವ ಹಬ್ಬ ಈ ಹಬ್ಬವನ್ನು ಭಾರತದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯಾಗಿ ಆಚರಣೆ ಮಾಡುತ್ತಾರೆ.

**ಛಾಯಾ ಎಂ ಗಣಾಚಾರಿ 7ನೇ ತರಗತಿ**

**ಜಿ.ವಿ.ಸಿ.ಹೆಚ್.ಪಿ.ಎಸ್. (ಆ.ಮಾ.)**

# ಅಹಿಂಸೆಯ ಹಾದಿ, ಸತ್ಯದ ಬೆಳಕು – ಗಾಂಧಿ ಜಯಂತಿ ಅಕ್ಕಮಹಾದೇವಿ ಬಾಲಿಕಾ ಪ್ರೌಢ ಶಾಲೆಯಲ್ಲಿ




ಅಕ್ಕಮಹಾದೇವಿ ಬಾಲಿಕಾ ಪ್ರೌಢ ಶಾಲೆಯಲ್ಲಿ ಅಕ್ಟೋಬರ್ 2, 2025 ರಂದು ರಾಷ್ಟ್ರಪಿತ ಮಹಾತ್ಮ ಗಾಂಧಿಜಿಯವರ 156ನೇ ಜನ್ಮದಿನವನ್ನು ಗೌರವಪೂರ್ವಕವಾಗಿ ಆಚರಿಸಲಾಯಿತು.ಕಾರ್ಯಕ್ರಮವು ಪ್ರಾರ್ಥನೆ ಹಾಗೂ ಗಾಂಧಿಜಿಯ ಚಿತ್ರಕ್ಕೆ ಪುಷ್ಪಾರ್ಚನೆಯಿಂದ ಆರಂಭವಾಯಿತು. ವಿದ್ಯಾರ್ಥಿಗಳು ಗಾಂಧಿಜಿಯ ಜೀವನ, ಸತ್ಯ-ಅಹಿಂಸೆ ತತ್ತ್ವಗಳ ಮೂಲಕ ಗಾಂಧೀಜಿಯ ಆದರ್ಶಗಳನ್ನು ನೆನಪಿಸಲಾಯಿತು.ಶಾಲೆಯ ಮುಖ್ಯಗುರುಗಳು ಮತ್ತು ಇತರೆ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿ. ನಮ್ಮ ಶಾಲೆಯಲ್ಲಿ ಗಾಂಧಿ ಜಯಂತಿಯನ್ನು ಶ್ರದ್ಧಾಪೂರ್ವಕವಾಗಿ ಗಾಂಧೀಜಿಯವರ ಭಾವಚಿತ್ರಕ್ಕೆ ನಮನ ಸಲ್ಲಿಸಲಾಯಿತು.

## ಗಾಂಧೀಜಿಯ ಪರಿಚಯ

ಮಹಾತ್ಮಗಾಂಧೀಜಿ, ಅಂದರೆ ಮೊಹನದಾಸ್ ಕರಮಚಂದ ಗಾಂಧಿ, 1869ರ ಅಕ್ಟೋಬರ್ 2ರಂದು ಗುಜರಾತ್‌ನ ಪೋರಬಂದರ್‌ನಲ್ಲಿ ಜನಿಸಿದರು. ಅವರು ಭಾರತದ ರಾಷ್ಟ್ರಪಿತ. ಲಂಡನ್‌ನಲ್ಲಿ ಕಾನೂನು ಅಭ್ಯಾಸ ಮಾಡಿ, ದಕ್ಷಿಣ ಆಫ್ರಿಕಾದಲ್ಲಿ ಜಾತಿ ಭೇದದ ವಿರುದ್ಧ ಹೋರಾಡಿ, ನಂತರ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ನಾಯಕರಾದರು.ಸರಳ ಜೀವನ, ಪ್ರಾಮಾಣಿಕತೆ, ಶಾಂತಿ ಮತ್ತು ಸ್ವಚ್ಛತೆಯ ಮೌಲ್ಯಗಳನ್ನು ಅವರು ಜೀವನದ ಮೂಲಕ ಸಾರಿದರು.

### ಗಾಂಧಿ ಜಯಂತಿಯ ಮಹತ್ವ

1. **ರಾಷ್ಟ್ರೋತ್ಸವ –** ಅಕ್ಟೋಬರ್ 2ರಂದು ಭಾರತದೆಲ್ಲೆಡೆ ರಾಷ್ಟ್ರೋತ್ಸವವಾಗಿ ಗಾಂಧಿ ಜಯಂತಿ ಆಚರಿಸಲಾಗುತ್ತದೆ.
2. **ಅಂತರರಾಷ್ಟ್ರೀಯ ಅಹಿಂಸಾ ದಿನ –** ಯುನೈಟೆಡ್ ನೇಶನ್ಸ್ (UN) ಈ ದಿನವನ್ನು ಅಹಿಂಸೆಯ ದಿನವೆಂದು ಘೋಷಿಸಿದೆ.
3. **ಸ್ವಚ್ಛತಾ ಪ್ರೇರಣೆ –** ಗಾಂಧಿಜಿ ಸ್ವಚ್ಛತೆಯ ಮಹತ್ವವನ್ನು ಹೆಚ್ಚು ಒತ್ತಿ ಹೇಳಿದರು. ಆದ್ದರಿಂದಲೇ ಭಾರತ ಸರ್ಕಾರ 2014ರಲ್ಲಿ ಅಕ್ಟೋಬರ್ 2ರಂದು "ಸ್ವಚ್ಛ ಭಾರತ ಅಭಿಯಾನ" ಪ್ರಾರಂಭಿಸಿತು.
4. **ಮೌಲ್ಯಗಳ ನೆನಪು –** ಸತ್ಯ, ಅಹಿಂಸೆ, ಸಮಾನತೆ, ಶಾಂತಿ ಇವುಗಳ ಮೌಲ್ಯವನ್ನು ನೆನಪಿಸಿಕೊಳ್ಳುವ ದಿನ.
5. **ವಿದ್ಯಾರ್ಥಿಗಳಿಗೆ ಪಾಠ –** ಗಾಂಧಿಜಿಯವರ ಆದರ್ಶಗಳನ್ನು ತಿಳಿದು, ತಮ್ಮ ಜೀವನದಲ್ಲಿ ಅನುಸರಿಸುವ ದಿನ.

### ಏಕೆ ನಾವು ಗಾಂಧಿ ಜಯಂತಿ ಆಚರಿಸುತ್ತೇವೆ?

ಗಾಂಧಿಜಿಯವರು ನಮ್ಮ ರಾಷ್ಟ್ರಪಿತ, ಸ್ವಾತಂತ್ರ್ಯ ಹೋರಾಟದ ಪ್ರಮುಖ ನಾಯಕ.ಅವರು ನಮಗೆ ಸತ್ಯ, ಅಹಿಂಸೆ, ಸಮಾನತೆ ಎಂಬ ಮೌಲ್ಯಗಳನ್ನು ಕಲಿಸಿದರು.ಅವರ ಜನ್ಮದಿನವನ್ನು ಅಕ್ಟೋಬರ್ 2ರಂದು ರಾಷ್ಟ್ರೋತ್ಸವವಾಗಿ ಆಚರಿಸಲಾಗುತ್ತದೆ.ವಿಶ್ವಸಂಸ್ಥೆಯು ಈ ದಿನವನ್ನು ಅಂತರರಾಷ್ಟ್ರೀಯ ಅಹಿಂಸಾ ದಿನವೆಂದು ಘೋಷಿಸಿದೆ.ಈ ದಿನವನ್ನು ಆಚರಿಸುವುದರ ಮೂಲಕ, ನಾವು ಗಾಂಧಿಜಿಯವರ ತತ್ತ್ವಗಳನ್ನು ಜೀವನದಲ್ಲಿ ಪಾಲಿಸಲು ಪ್ರೇರಣೆ ಪಡೆಯುತ್ತೇವೆ.

**ಲೇಖನ ಸಂಗ್ರಹ :- ಮಮತ ಎನ್ ಎಸ್**
**ಅಕ್ಕಮಹಾದೇವಿ ಬಾಲಿಕಾ ಪ್ರೌಢ ಶಾಲೆ**

# ಅಕ್ಕಮಹಾದೇವಿ ಬಾಲಕಿಯರ ಪ್ರೌಢ ಶಾಲೆಯಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು




ನರಸರಾಜ ಕ್ಯಾಂಪಾಸ್ ನ ಎಲ್ಲಾ ಮುಖ್ಯ  ಶಿಕ್ಷಕರು, ಶಿಕ್ಷಕರು  ಮತ್ತು ವಿದ್ಯಾರ್ಥಿಗಳು  ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಭಕ್ತಿಪೂರ್ವಕವಾಗಿ ಆಚರಿಸಿದರು. ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ವಾಲ್ಮೀಕಿ ಮಹರ್ಷಿಯ ಜೀವನ ಮತ್ತು ಉಪದೇಶಗಳನ್ನು ಸ್ಮರಿಸಿದರು.

# ಅಕ್ಕಮಹಾದೇವಿ ಬಾಲಕಿಯರ ಪ್ರೌಢ ಶಾಲೆಯ ವಿದ್ಯಾರ್ಥಿನಿಯರ ಅದ್ಭುತ ಕ್ರೀಡಾ ಸಾಧನೆ



ಅಕ್ಕಮಹಾದೇವಿ ಬಾಲಕಿಯರ ಪ್ರೌಢ ಶಾಲೆಯ ವಿದ್ಯಾರ್ಥಿನಿಯರು ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ತಮ್ಮ ಪ್ರತಿಭೆ ಮೆರೆದಿದ್ದು, ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುವುದು ಶಾಲೆಗೆ ಹೆಮ್ಮೆ ತಂದಿದೆ.

ಶಾಟ್‌ಪುಟ್ (Shot Put) ಮತ್ತು ಡಿಸ್ಕಸ್ ತ್ರೋ (Discus Throw) ಸ್ಪರ್ಧೆಗಳಲ್ಲಿ ಮಹೇಶ್ವರಿ ಅವರು ಅತ್ಯುತ್ತಮ ಪ್ರದರ್ಶನ ನೀಡಿ ಎರಡೂ ವಿಭಾಗಗಳಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

100 ಮೀಟರ್ ಓಟ (100 m Running) ವಿಭಾಗದಲ್ಲಿ ಸುಪ್ರೀಥಾ ಅವರು ಶೀಘ್ರಗಾಮಿ ಓಟದ ಮೂಲಕ ಪ್ರಥಮ ಸ್ಥಾನ ಗಳಿಸಿದ್ದಾರೆ.4 x 100 ಮೀಟರ್ ರಿಲೇ (Relay) ತಂಡವು ಉತ್ತಮ ತಂಡಭಾವ ತೋರಿಸಿ ತೃತೀಯ ಸ್ಥಾನ ಪಡೆದುಕೊಂಡಿದೆ.ಈ ಸಾಧನೆಯಿಂದ ಶಾಲೆಯ ಹೆಮ್ಮೆ ಮತ್ತಷ್ಟು ಹೆಚ್ಚಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇವರಿಗೆ ಹಾರ್ದಿಕ ಅಭಿನಂದನೆ ಸಲ್ಲಿಸಿದ್ದಾರೆ.

# ಸ್ವಚ್ಛ ಭಾರತ ಸ್ವಸ್ಥ ಭಾರತ



ನಮ್ಮ ದೇಶದಲ್ಲಿ ಏನಿಲ್ಲಾ ಎನ್ನುವುದಕ್ಕಿಂತ ಏನೇನೆಲ್ಲಾ ಇವೆ, ಎಂಬುದೇ ಅತ್ಯಂತ ಪ್ರಮುಖವಾದ ಮಾತು. ಇದರನ್ವಯ ಈ ಭೂಮಿ ನಮಗೆಲ್ಲವನ್ನು ಕೊಟ್ಟಿದೆ. ಆದರೆ ನಾವು ಈ ಭೂಮಿಗೆ ಏನು ಕೊಟ್ಟಿದ್ದೇವೆ? ಎಂಬುದನ್ನು ನಾವು ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಈ ದೇಶಕ್ಕೆ ಕಾಡುತ್ತಿರುವ ಬಹುದೊಡ್ಡ ಸಮಸ್ಯೆ ಎಂದರೆ ಪ್ಲಾಸ್ಟಿಕ್. ಇಂತಹ ಪ್ಲಾಸ್ಟಿಕ್ ನಮ್ಮ ನಿತ್ಯ ಜೀವನದಲ್ಲಿ ಇದೆಲ್ಲದೆ ಬದುಕೆ ಇಲ್ಲಾ ಎಂಬಂತಾಗಿದೆ.

ಇಂದಿನ ವಿದ್ಯಾರ್ಥಿಗಳಾದ ನಾವು ಈ ನಿಟ್ಟಿನಲ್ಲಿ ಯೋಚಿಸಬೇಕಾಗಿದೆ. ಆದ್ದರಿಂದ ನಮ್ಮ ಶಿಕ್ಷಕರಾದ ರುದ್ರೇಶಮೂರ್ತಿ ಸರ್ ಅವರ ಮಾರ್ಗದರ್ಶನದಲ್ಲಿ ಪ್ಲಾಸ್ಟಿಕ್ ಮುಕ್ತ ಮನೆ, ಶಾಲೆ ಮಾಡಬೇಕೆಂದು ಯೋಚಿಸಿ ನಮ್ಮ ಬಳಿಯಿರುವ ಬೇಡವಾಡ ನೀರಿನ ಬಾಟಲ್‌ಗಳಲ್ಲಿ ದಸರಾ ರಜೆಯ ದಿನಗಳಲ್ಲಿ ನಮ್ಮ ಮನೆಗಳಲ್ಲಿ ಉತ್ಪತ್ತಿಯಾದ ಪ್ಲಾಸ್ಟಿಕ್ ತ್ಯಾಜ್ಯವನ್ನು ಒಂದು ಬಾಟಲಿಯಲ್ಲಿ ಸಂಗ್ರಹಿಸಿ ಪುನಃ ಬಳಕೆ ಮಾಡಲು ಪರಿವರ್ತನೆಗೆ ಕಳುಹಿಸಲಾಯಿತು. ಇನ್ನು ಮುಂದೆ ಪ್ರತಿ ತಿಂಗಳು ಈ ರೀತಿ ಸಂಗ್ರಹಿಸುವ ಉದ್ದೇಶವನ್ನು ಹೊದಿದ್ದೇವೆ.

ಪ್ಲಾಸ್ಟಿಕ್ ಮುಕ್ತ ಪರಿಸರಕ್ಕೆ ಈ ಅಲ್ಪ ಕಾರ್ಯದಿಂದ ಪರಿಸರಕ್ಕಾಗಿ ಒಂದು ಹೆಜ್ಜೆಯಿಡುತ್ತಿದ್ದೇವೆ. ಎನಿಸಿತು.


ಸೋಮೇಶ್ವರ ಜಿ.ಪಿ ರಿಷಿಕಾ. 5 ನೇ ತರಗತಿ
ಅದಿತಿ.ಎಂ, 6ನೇ ತರಗತಿ.
ಪ್ರಶಾಂತ ಎನ್, ವೈಷ್ಣವಿ, ಕೌಶಲ್ 7 ನೇ ತರಗತಿ

**ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ನರ್ಸರಿ ಹಿರಿಯ ಪ್ರಾಥಮಿಕ ಶಾಲೆ (ಕನ್ನಡ ಮತ್ತು ಆಂಗ್ಲ ಮಾದ್ಯಮ)**
**ವಿನೋಬನಗರ ದಾವಣಗೆರೆ**


# ಅಂತಾರಾಷ್ಟ್ರೀಯ ಓಜೋನ್ ದಿನಾಚರಣೆ

ಪ್ರತಿ ವರ್ಷ ಸೆಪ್ಟೆಂಬರ್ 16 ರಂದು ಅಂತಾರಾಷ್ಟ್ರೀಯ ಓಝೋನ್ ಪದರ ಸಂರಕ್ಷಣಾ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಓಝೋನ್ ಪದರದ ಮಹತ್ವ ಮತ್ತು ಅದನ್ನು ರಕ್ಷಿಸುವ ಅವಶ್ಯಕತೆಯ ಬಗ್ಗೆ ಜಾಗೃತಿ ಮೂಡಿಸುತ್ತದೆ. ಓಝೋನ್ ಪದರವು ಭೂಮಿಯ ವಾತಾವರಣದಲ್ಲಿರುವ ಒಂದು ತೆಳು ಪದರವಾಗಿದ್ದು, ಸೂರ್ಯನ ಹಾನಿಕಾರಕ *ನೇರಳಾತೀತ (UV) ಕಿರಣಗಳಿಂದ ನಮ್ಮನ್ನು ರಕ್ಷಿಸುವ ರಕ್ಷಾ ಕವಚವಾಗಿ ಕಾರ್ಯನಿರ್ವಹಿಸುತ್ತದೆ.

**ಹಿನ್ನೆಲೆ ಮತ್ತು ಇತಿಹಾಸ*** ಓಝೋನ್ ಪದರವನ್ನು ಮೊದಲು 1913 ರಲ್ಲಿ ಫ್ರೆಂಚ್ ಭೌತಶಾಸ್ತ್ರಜ್ಞರಾದ ಫ್ಯಾಬ್ರಿ ಚಾರ್ಲ್ಸ್ ಮತ್ತು ಹೆನ್ರಿ ಬುಸನ್ ಕಂಡುಹಿಡಿದರು. 1980ರ ದಶಕದಲ್ಲಿ ವಿಜ್ಞಾನಿಗಳು ಅಂಟಾರ್ಕ್ಟಿಕಾದ ಮೇಲೆ ಓಝೋನ್ ಪದರದಲ್ಲಿ ದೊಡ್ಡ ರಂಧ್ರ ಕಂಡುಹಿಡಿದರು. ಇದು ಕ್ಲೋರೋಫ್ಲೋರೋಕಾರ್ಬನ್ಗಳು ಮತ್ತು ಇತರ ಹಾನಿಕಾರಕ ರಾಸಾಯನಿಕಗಳ ಬಳಕೆಯಿಂದ ಉಂಟಾಗಿದೆ ಎಂದು ತಿಳಿದುಬಂದಿತು. ಈ ರಾಸಾಯನಿಕಗಳು ರೆಫ್ರಿಜರೇಟರ್ಗಳು, ಹವಾನಿಯಂತ್ರಣಗಳು ಮತ್ತು ಏರೋಸಾಲ್ ಸ್ಪ್ರೇಗಳಲ್ಲಿ ಬಳಸಲ್ಪಡುತ್ತಿದ್ದವು. ಈ ಆತಂಕಕಾರಿ ಬೆಳವಣಿಗೆಯ ನಂತರ, ಓಝೋನ್ ಪದರವನ್ನು ರಕ್ಷಿಸಲು ಜಾಗತಿಕ ಕ್ರಮದ ಅಗತ್ಯವನ್ನು ವಿಶ್ವಸಂಸ್ಥೆ ಮನಗಂಡಿತು. ಪರಿಣಾಮವಾಗಿ, 1987ರ ಸೆಪ್ಟೆಂಬರ್ 16 ರಂದು ವಿಶ್ವಸಂಸ್ಥೆ ಮತ್ತು ಸುಮಾರು 45 ದೇಶಗಳು ಕೆನಡಾದ ಮಾಂಟ್ರಿಯಲ್ನಲ್ಲಿ "ಓಝೋನ್ ಪದರವನ್ನು ಹಾಳುಮಾಡುವ ವಸ್ತುಗಳ ಕುರಿತ ಮಾಂಟ್ರಿಯಲ್ ಪ್ರೋಟೋಕಾಲ್" ಗೆ ಸಹಿ ಹಾಕಿದವು. ಇದು ಓಝೋನ್ ಪದರವನ್ನು ಹಾನಿಗೊಳಿಸುವ ರಾಸಾಯನಿಕಗಳ ಉತ್ಪಾದನೆ ಮತ್ತು ಬಳಕೆಯನ್ನು ಹಂತ ಹಂತವಾಗಿ ನಿಲ್ಲಿಸುವ ಒಪ್ಪಂದವಾಗಿದೆ. ಮಾಂಟ್ರಿಯಲ್ ಪ್ರೋಟೋಕಾಲ್ಗೆ ಸಹಿ ಹಾಕಿದ ಐತಿಹಾಸಿಕ ಘಟನೆಯನ್ನು ಸ್ಮರಿಸಲು, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 1994 ರಲ್ಲಿ ಸೆಪ್ಟೆಂಬರ್ 16 ಅನ್ನು ಓಝೋನ್ ಪದರದ ಸಂರಕ್ಷಣೆಗಾಗಿ ಅಂತರರಾಷ್ಟ್ರೀಯ ದಿನವೆಂದು ಘೋಷಿಸಿತು.

**ಓಝೋನ್ ದಿನದ ಮಹತ್ವ:**

* ಜಾಗೃತಿ ಮೂಡಿಸುವುದು: ಓಝೋನ್ ಪದರದ ಸವಕಳಿ ಮತ್ತು ಅದರ ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಈ ದಿನದ ಪ್ರಮುಖ ಉದ್ದೇಶವಾಗಿದೆ.

* ಆರೋಗ್ಯ ರಕ್ಷಣೆ : ಸೂರ್ಯನ ನೇರಳಾತೀತ ಕಿರಣಗಳು ಚರ್ಮದ ಕ್ಯಾನ್ಸರ್, ಕಣ್ಣಿನ ಪೊರೆ ಮತ್ತು ರೋಗ ನಿರೋಧಕ ಶಕ್ತಿಯ ಮೇಲೆ ಪರಿಣಾಮ ಬೀರಬಹುದು. ಓಝೋನ್ ದಿನವು ಈ ಅಪಾಯಗಳ ಬಗ್ಗೆ ಎಚ್ಚರಿಸುತ್ತದೆ.

* ಪರಿಸರ ಸಂರಕ್ಷಣೆ: ಓಝೋನ್ ಪದರವು ಕೇವಲ ಮಾನವರನ್ನು ಮಾತ್ರವಲ್ಲದೆ ಸಸ್ಯಗಳು ಮತ್ತು ಸಮುದ್ರ ಜೀವಿಗಳನ್ನೂ ರಕ್ಷಿಸುತ್ತದೆ. ಇದರ ಸಂರಕ್ಷಣೆ ಒಟ್ಟಾರೆ ಪರಿಸರ ಸಮತೋಲನಕ್ಕೆ ಅವಶ್ಯಕವಾಗಿದೆ.

* ಥೀಮ್: ಪ್ರತಿ ವರ್ಷ ಓಝೋನ್ ದಿನವನ್ನು ನಿರ್ದಿಷ್ಟ ವಿಷಯದ ಅಡಿಯಲ್ಲಿ ಆಚರಿಸಲಾಗುತ್ತದೆ. ಇದು ಪ್ರಸ್ತುತ ಪರಿಸರ ಸವಾಲುಗಳ ಮೇಲೆ ಗಮನ ಹರಿಸಲು ಸಹಾಯ ಮಾಡುತ್ತದೆ. 2025ರ ಥೀಮ್ "ವಿಜ್ಞಾನದಿಂದ ಜಾಗತಿಕ ಕ್ರಿಯೆಗೆ(FROM SCIENCE TO GLOBAL ACTION)" ಒಟ್ಟಾರೆಯಾಗಿ, ಓಝೋನ್ ದಿನವು ನಮ್ಮ ಭೂಮಿಯ ರಕ್ಷಣಾ ಕವಚವಾದ ಓಝೋನ್ ಪದರವನ್ನು ಸಂರಕ್ಷಿಸಲು ನಾವು ಸಾಮೂಹಿಕವಾಗಿ ಹೇಗೆ ಕಾರ್ಯನಿರ್ವಹಿಸಬಹುದು ಎಂಬುದನ್ನು ನೆನಪಿಸುತ್ತದೆ.

## ಸ್ವಾಮಿ ವಿವೇಕಾನಂದರ ಚಿಕಾಗೋ ವಿಶ್ವಧರ್ಮ ಸಮ್ಮೇಳನದ ಪ್ರಯುಕ್ತ ಭಾಷಣ ಸ್ಪರ್ಧೆ

ಶ್ರೀ ರಾಮಕೃಷ್ಣ ಮಿಷನ್ ದಾವಣಗೆರೆ ಇವರು 1893 ಸೆಪ್ಟೆಂಬರ್ 11ರಂದು ಸ್ವಾಮಿ ವಿವೇಕಾನಂದರು ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣಕ್ಕೆ ಇದೆ 2025 ಸೆಪ್ಟೆಂಬರ್ 11ಕ್ಕೆ 133 ವರ್ಷಗಳು ತುಂಬಿರುತ್ತದೆ. ಇದರ ಸ್ಮರಣೆಗಾಗಿ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ನಡೆಸಿದ ಭಾಷಣ ಸ್ಪರ್ಧೆಯಲ್ಲಿ ನಮ್ಮ ಶಾಲೆಯ 8, 9 & 10ನೇ ತರಗತಿಯಿಂದ 30 ವಿದ್ಯಾರ್ಥಿಗಳು ಭಾಗವಹಿಸಿದ್ದು, ಅದರಲ್ಲಿ ಎಂಟನೇ ತರಗತಿಯಿಂದ ಸಾಹಿರಾಬಾನು ಪ್ರಥಮ ಸ್ಥಾನ, ಜೀವನ್ ದ್ವಿತೀಯ ಸ್ಥಾನ, ಅಂಜುಮದಿಯ ತೃತೀಯ ಸ್ಥಾನ. 9ನೇ ತರಗತಿಯಿಂದ ಚಂದನ ಸಿ ಪ್ರಥಮ ಸ್ಥಾನ, ಆಕಾಶ್ ಕುಮಾರ್ ಎನ್ ಹುಗ್ಗಿ ದ್ವಿತೀಯ ಸ್ಥಾನ, & ಕಾವ್ಯ ಜಿ ಎಸ್ ತೃತೀಯ ಸ್ಥಾನ. 10ನೇ ತರಗತಿಯಿಂದ ಗಾಯತ್ರಿ ಜಿ ಪ್ರಥಮ ಸ್ಥಾನ, ಯೋಗೀಶ್ ಜಿ ಎಚ್ ದ್ವಿತೀಯ ಸ್ಥಾನ, ಅಂಕಿತ ಎನ್ ಹುಗ್ಗಿ ತೃತೀಯ ಸ್ಥಾನ ಪಡೆದುಕೊಂಡಿರುತ್ತಾರೆ. ಪ್ರಥಮ ಬಹುಮಾನವನ್ನು ಪಡೆದ ವಿದ್ಯಾರ್ಥಿಗಳಿಗೆ 500 ನಗದು ಜೊತೆಗೆ 500 ರೂ ಬೆಲೆಯ ಪುಸ್ತಕಗಳು ಮತ್ತು ಪ್ರಶಸ್ತಿ ಪತ್ರ, ದ್ವಿತೀಯ ಬಹುಮಾನ 250 ನಗದು ಜೊತೆಗೆ 250 ರೂ ಬೆಲೆಯ ಪುಸ್ತಕಗಳು ಮತ್ತು ತೃತೀಯ ಬಹುಮಾನ 150 ನಗದು ಜೊತೆಗೆ 500 ರೂ ಬೆಲೆಯ ಪುಸ್ತಕಗಳು ಮತ್ತು ಪ್ರಶಸ್ತಿ ಪತ್ರವನ್ನು ಕೊಟ್ಟು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದ್ದಾರೆ. ಬಹುಮಾನವನ್ನು ಪಡೆದ ನಮ್ಮ ಶಾಲೆಯ ಎಲ್ಲ ವಿದ್ಯಾರ್ಥಿಗಳಿಗೂ ಶಾಲೆಯ ಪರವಾಗಿ ಮತ್ತು ಸಂಸ್ಥೆಯ ಪರವಾಗಿ ಹೃತ್ಪೂರ್ವಕವಾದ ಅಭಿನಂದನೆಗಳು.

## ಹಿಂದಿ ದಿವಸ್ ಆಚರಣೆ

ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ದಿನಾಂಕ 11.09.2025 ರಂದು ಹಿಂದಿ ದಿವಸ್ಆಚರಿಸಲಾಯಿತು. ಹಿಂದಿ ಶಿಕ್ಷಕಿಯರಾದ ಶ್ರೀಮತಿ ಜ್ಯೋತಿ ಎಚ್ ಬಿ ಇವರು ವಿವಿಧ ಚಟುವಟಿಕೆಗಳನ್ನು ಮಕ್ಕಳ ಮೂಲಕ ಮಾಡಿಸಿದರು. ಅದರಲ್ಲಿ ಒಂದು ಕಿರು ನಾಟಕವನ್ನು ಹಿಂದಿ ಭಾಷೆಯಲ್ಲಿ ಮೊಬೈಲ್, ದೂರವಾಣಿ ಮತ್ತು ಪತ್ರದ ಕುರಿತಾದ ಒಂದು ಅದ್ಭುತವಾದ ನಾಟಕವನ್ನು ನಮ್ಮ ಎಂಟನೇ ತರಗತಿ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದರು. ಹಾಗೆಯೇ ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ಶಾಲೆಯ ಆಂಗ್ಲ ಮಾಧ್ಯಮದ ಏಳನೇ ತರಗತಿಯ ವಿದ್ಯಾರ್ಥಿಗಳು, ಗುರುಗಳು ಹಾಗೂ ವಿದ್ಯಾರ್ಥಿಗಳ ನಡುವಿನ ಸಂಬಂಧದ ಕುರಿತಾದ ಒಂದು ನಾಟಕವನ್ನು ಹಿಂದಿ ಭಾಷೆಯಲ್ಲಿ ಪ್ರಸ್ತುತಪಡಿಸಿದರು. ಈ ನಾಟಕದಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೂ ದಿನಾಂಕ 16.09.2025 ರಂದು 7ನೇ ತರಗತಿಗೆ ವಿದ್ಯಾರ್ಥಿಗಳಿಗೆ ಒಂದು ನೋಟ್ ಬುಕ್ ಹಾಗೂ ಎಂಟನೇ ತರಗತಿಯ ವಿದ್ಯಾರ್ಥಿಗಳಿಗೆ ಪೆನ್ ಅನ್ನು ಕೊಡುವುದರ ಮೂಲಕ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು.

# ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ

ನಮ್ಮ ಪ್ರಜಾಪ್ರಭುತ್ವವನ್ನು ಬಲಪಡಿಸಲು ಮತ್ತು ಅದರ ಮೌಲ್ಯಗಳು ಮತ್ತು ತತ್ವಗಳನ್ನು ಎತ್ತಿ ಹಿಡಿಯಲು ಈ ದಿನವನ್ನು ವಾರ್ಷಿಕವಾಗಿ ಪ್ರಪಂಚದಾದ್ಯಂತ ಆಚರಿಸಲಾಗುತ್ತದೆ. ಪ್ರಜಾಪ್ರಭುತ್ವವು ಒಂದು ದೇಶದ ಎಲ್ಲಾ ನಾಗರಿಕರ ಸಮಾನ ಭಾಗವಹಿಸುವಿಕೆಯೊಂದಿಗೆ ಕಾರ್ಯನಿರ್ವಹಿಸುವ ಸರ್ಕಾರದ ಒಂದು ರೂಪವಾಗಿದೆ. ಸಂವಿಧಾನದ ಗುರಿ ಮತ್ತು ಉದ್ದೇಶಗಳನ್ನು ಬಲಪಡಿಸಲು ಎಲ್ಲಾ ಸರಕಾರಿ ಶಾಲಾ ಕಾಲೇಜು ಮತ್ತು ಕಚೇರಿಗಳಲ್ಲಿ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಾಗುತ್ತಿದೆ. ನಮ್ಮ ಶಾಲೆಯಲ್ಲಿಯೂ ಸಹ ಈ ದಿನದಂದು ಎಲ್ಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪ್ರತಿಜ್ಞೆ ಮಾಡುವುದರ ಮೂಲಕ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಾಯಿತು.

## ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ 8ನೇ ತರಗತಿ ವಿದ್ಯಾರ್ಥಿಗಳಿಂದ ರಚಿತವಾದ ಚಿತ್ರಗಳು







**ದರ್ಶನ್ 8ನೇ ತರಗತಿ ಎಸ್ ಜೆ ಜೆ ಎಮ್ ಪ್ರೌಢಶಾಲೆಯ ವಿದ್ಯಾರ್ಥಿ ತನ್ನ ಸ್ನೇಹಿತರಿಗೆ ಪೇಪರ್ ಕಟಿಂಗ್ ಹೇಳಿಕೊಡುತ್ತಿರುವುದು.**








